ಬಿ.ಎಲ್.ಡಿ.ಇ. ಸಂಸ್ಥೆಯ

# ಎ. ಎಸ್. ಪಾಟೀಲ ವಾಣಿಜ್ಯ ಮಹಾವಿದ್ಯಾಲಯ (ಸ್ವಾಯತ್ತತೆ) ವಿಜಯಪುರ.

## ಪರೀಕ್ಷಾ ವಿಭಾಗ

ದಿನಾಂಕ: 04-09-2020

## ಸೂಚನೆ

- 2019-20ನೇ ಸಾಲಿನ 6ನೇ ಸೆಮಿಸ್ಟರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತಿಳಿಸುವದೇನೆಂದರೆ ಪ್ರಸ್ತುತ ಸೆಪ್ಟಂಬರ ತಿಂಗಳಲ್ಲಿ ನಡೆಯುತ್ತಿರುವ ಪರೀಕ್ಷೆಯಲ್ಲಿ ತಾವು ಎಲ್ಲ ವಿಷಯಗಳಿಗೆ ಪರೀಕ್ಷೆ ಬರೆಯುವದು ಕಡ್ಡಾಯವಾಗಿದೆ.
- 2019-20ನೇ ಸಾಲಿನ 6ನೇ ಸೆಮಿಸ್ಟರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಹಿಂದಿನ ಸೆಮಿಸ್ಟರ ಅಂದರೆ 2ನೇ ಮತ್ತು 4ನೇ ಸೆಮಿಸ್ಟರನಲ್ಲಿ ಯಾವದೇ ವಿಷಯಗಳು ಅನುತ್ತೀರ್ಣರಾಗಿ ಬಾಕಿ ಉಳಿದಿದ್ದರೆ ಆ ವಿಷಯಗಳಿಗೆ ಪ್ರಸ್ತುತ ನಡೆಯುತ್ತಿರುವ ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಬರೆಯುವುದು ಕಡ್ಡಾಯವಾಗಿದ್ದು ಒಂದು ವೇಳೆ 6ನೇ ಸೆಮಿಸ್ಟರ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರನಲ್ಲಿ ಬಾಕಿ ಇದ್ದ ವಿಷಯಕ್ಕೆ ಪರೀಕ್ಷೆ ಹಾಜರಾಗದೇ ಮತ್ತು ಆ ವಿಷಯಗಳಲ್ಲಿ ಉತ್ತೀರ್ಣರಾಗದೆ ಇದ್ದಲ್ಲಿ ತಮ್ಮ 6ನೇ ಸೆಮಿಸ್ಟರ ಫಲಿತಾಂಶವನ್ನು ಪ್ರಕಟಿಸುವದಾಗುವದಿಲ್ಲ ಈಗಾಗಲೇ ಪ್ರಕಟಿಸಿರುವ ವೇಳಾ ಪಟ್ಟಿಯಂತೆ 2ನೇ ಮತ್ತು 4ನೇ ಸೆಮಿಸ್ಟರ ಪರೀಕ್ಷೆಗಳು ನಡೆಯಲಿವೆ.
- 2019-20ನೇ ಸಾಲಿನ 4ನೇ ಸೆಮಿಸ್ಟರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತಿಳಿಸುವದೇನೆಂದರೆ ತಮಗೆ 4ನೇ ಸೆಮಿಸ್ಟರ ಪರೀಕ್ಷೆ ಬರೆಯಲು ಕರ್ನಾಟಕ ಸರ್ಕಾರ ರಿಯಾಯತಿ ನೀಡಿದ್ದರೂ ಸಹ ತಾವು ಒಂದು ವೇಳೆ 2ನೇ ಸೆಮಿಸ್ಟರ ಯಾವದೇ ವಿಷಯಗಳಲ್ಲಿ ಅನುತ್ತೀರ್ಣರಾಗಿ ಬಾಕಿ ಉಳಿದಿದ್ದರೆ ಪ್ರಸ್ತುತ ನಡೆಯುತ್ತಿರುವ ಪರೀಕ್ಷೆಯಲ್ಲಿ 2ನೇ ಸೆಮಿಸ್ಟರ ಬಾಕಿ ಉಳಿದ ವಿಷಯಗಳ ಪರೀಕ್ಷೆ ಬರೆಯಬಹುದು. ಆದರೆ ಇದಕ್ಕೆ ಯಾವುದೇ ರಿಯಾಯತಿ ಇರುವದಿಲ್ಲ.
- 2019-20 ಕಿಂತ ಹಿಂದಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು 2ನೇ, 4ನೇ ಮತ್ತು 6ನೇ ಸೆಮಿಸ್ಟರಗಳಲ್ಲಿ ಅನುತ್ತೀರ್ಣರಾದ ಬಾಕಿ ಉಳಿದ ವಿಷಯಗಳಿಗೆ ಪ್ರಸ್ತುತ ನಡೆಯುತ್ತಿರುವ ಪರೀಕ್ಷೆಗೆ ಹಾಜರಾಗಿ ತಮ್ಮ ಬಾಕಿ ಇದ್ದ ವಿಷಯಗಳಿಗೆ ಪರೀಕ್ಷೆ ಬರೆಬಹುದು. ಅದಲ್ಲದೆ ತಮ್ಮ ಗಮನಕ್ಕೆ ತರುವ ಪ್ರಮುಖ ವಿಷಯವೆಂದರೆ ತಮ್ಮ ಎಲ್ಲಾ ಸೆಮಿಸ್ಟರಗಳಲ್ಲಿ ಬಾಕಿ ಇರುವ ವಿಷಯಗಳಲ್ಲಿ ಉತ್ತೀರ್ಣರಾದರೆ ಮಾತ್ರ ಅಂತಿಮ ವರ್ಷದ ಫಲಿತಾಂಶ ಪ್ರಕಟಿಸಲಾಗುವುದು.
- ಪ್ರಸ್ತುತ ಸೆಪ್ಟಂಬರ ತಿಂಗಳಲ್ಲಿ ನಡೆಯುವ 2ನೇ, 4ನೇ ಮತ್ತು 6ನೇ ಸೆಮಿಸ್ಟರ ಪರೀಕ್ಷೆ ವೇಳಾಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದ್ದು ಅದೆ ಪ್ರಕಾರ ಪರೀಕ್ಷೆಗಳು ನಡೆಯಲಿವೆ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಪರೀಕ್ಷೆ ಬಗ್ಗೆ ತಮಗೆ ಯಾವದೇ ಮಾಹಿತಿ ಬೇಕಾದಲ್ಲಿ ದಿನಾಂಕ 06-09-2020 ಒಳಗಾಗಿ ಪರೀಕ್ಷೆ ವಿಭಾಗದಲ್ಲಿ ತಿಳಿದುಕೊಳ್ಳಬಹುದು.

- ಈ ಮೇಲೆ ವಿವರಿಸುವಂತೆ ಎಲ್ಲ ಪರೀಕ್ಷೆಗಳು ನಡೆಯಲಿದ್ದು ಒಂದು ವೇಳೆ ಕಾಲೇಜು ಶಿಕ್ಷಣ ಇಲಾಖೆ ಕರ್ನಾಟಕ ಸರಕಾರ ಮತ್ತು ರಾಣಿಚೆನ್ನಮ್ಮ ವಿಶ್ವವಿದ್ಯಾಲಯದಿಂದ ಯಾವದೇ ಮಾರ್ಗಸೂಚಿಗಳನ್ನು ನೀಡಿದ ಸಮಯದಲ್ಲಿ ಅದಕ್ಕೆ ಅನುಗುಣವಾಗಿ ನಮ್ಮ ಪರೀಕ್ಷೆಗಳನ್ನು ನಡೆಸಲಾಗುವುದು.
- ಎಲ್ಲ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಿಶೇಷ ಸೂಚನೆಯೆಂದರೆ ಕರೋನಾ ಮಹಾಮಾರಿ ರೋಗದ ವಿರುದ್ಧ ಪರಿಣಾಮಕಾರಿಯಾಗಿ ಕ್ರಮ ಜರುಗಿಸಲು ಪರೀಕ್ಷೆಗೆ ಹಾಜರಾಗುವ ವೇಳೆಯಲ್ಲಿ ಕೆಳಗಿನ ಎಲ್ಲ ವಿಷಯಗಳನ್ನು ಎಲ್ಲರೂ ಕಡ್ಡಾಯವಾಗಿ ಅನುಸರಿಸಬೇಕು.

## <u>ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸೂಚನೆಗಳು</u>

- ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿ/ನಿಯರು 45 ನಿಮಿಷ ಮುಂಚಿತವಾಗಿ ಮಹಾವಿದ್ಯಾಲಯದ ಆವರಣದಲ್ಲಿ ಹಾಜರಿರಬೇಕು.
- ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿ/ನಿಯರು ತಮ್ಮ ಪ್ರವೇಶ ಪತ್ರ ಮತ್ತು ಗುರುತಿನ ಚೀಟಿ ಕಡ್ಡಾಯವಾಗಿ ತರಬೇಕು.
- ಪರೀಕ್ಷೆಗೆ ಹಾಜರಾಗುವ ಪ್ರತಿಯೊಬ್ಬ ವಿದ್ಯಾರ್ಥಿ/ನಿಯರು ಮುಖಕ್ಕೆ ಕಡ್ಡಾಯವಾಗಿ ಮಾಸ್ಕ ಧರಿಸಬೇಕು.
- ಮಹಾವಿದ್ಯಾಲಯದ ಆವರಣದಲ್ಲಿ ಪ್ರತಿಯೊಬ್ಬರು ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳಬೇಕು.
- ಪರೀಕ್ಷೆಗೆ ಹಾಜರಾಗಲು ಬಂದಂತ ಯಾವುದೇ ವಿದ್ಯಾರ್ಥಿ/ನಿಯರು ಆರೋಗ್ಯ ಸಮಸ್ಯೆಯಿದ್ದಲ್ಲಿ ಪರೀಕ್ಷಾ ನಿರ್ವಹಣಾ ಅಧಿಕಾರಿಗಳಿಗೆ ತಪ್ಪದೇ ತಿಳಿಸಬೇಕು.
- ಪರೀಕ್ಷೆ ಬರೆಯುವ ವೇಳೆಯಲ್ಲಿ ಯಾವುದೇ ಆರೋಗ್ಯ ಸಮಸ್ಯೆ ಉಂಟಾದಲ್ಲಿ ಕೊಠಡಿ ಮೇಲ್ವಿಚಾರಕರಿಗೆ ತಪ್ಪದೆ ತಿಳಿಸಿ.
- ಪರೀಕ್ಷೆಗೆ ಬಂದ ವೇಳೆಯಲ್ಲಿ ನಿಮಗೆ ಸಂಬಂದಪಡದ ವಸ್ತುಗಳನ್ನು ಮುಟ್ಟಬಾರದು.
- ಮೇಲಿಂದ ಮೇಲೆ ಕೈಗಳಿಗೆ ಸೆನಿಟೈಜರ ತಪ್ಪದೆ ಬಳಸಿ.
- ನೀವು ಮನೆಯಿಂದ ತಂದಿರುವ ಕುಡಿಯುವನೀರನ್ನು ಬಳಸಿ.
- ಪ್ರತಿಯೊಂದು ಪರೀಕ್ಷೆ ಮುಗಿದ ಮೇಲೆ ನಿಮ್ಮ ಕೊಠಡಿಗಳನ್ನು ಸಂಪೂರ್ಣವಾಗಿ ಸೆನಿಟೈಜರ ಮಾಡಿದ ಬಗ್ಗೆ ಖಾತ್ರಿ ಪಡಿಸಿಕೊಳ್ಳಿ.
- ನಿಮ್ಮ ಪೆನ್ನು ಮತ್ತು ಉಳಿದ ಪರೀಕ್ಷಾ ಉಪಕರಣಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ಬದಲಾಯಿಸಿಕೊಳ್ಳಬೇಡಿ.

ಪರೀಕ್ಷಾ ನಿಯಂತ್ರಣಾಧಿಕಾರಿಗಳು

A.S.Patil College of Commerce
(Autonomous)
BIJAPUR.